ಹೆಚ್ಚು ಸಂಕಷ್ಟದ್ದಾಗಿತ್ತು. ಎಷ್ಟೋ ಸಲ ಫ್ರೇಮ್‌ನಲ್ಲಿ ನಾವೇ ಕಾಣಿಸ್ತಿರಲಿಲ್ಲ. ಕ್ಯಾಮೆರಾ ಮುಂದೆಲ್ಲ ಮಂಜು ಮುಸುಕಿಬಿಡುತ್ತಿತ್ತು. ಈ ಎಲ್ಲ ಸವಾಲುಗಳನ್ನು ಎದುರಿಸಿಕೊಂಡೂ ಚಿತ್ರೀಕರಣ ನಡೆಸಿದ ಅನುಭವ ತುಂಬ ಚೆನ್ನಾಗಿತ್ತು' ಎನ್ನುವ ಅವರು 'ಬನಾರಸ್' ನನ್ನ ಬದುಕಿನಲ್ಲಿಯೇ ಎಂದೆಂದೂ ಮರೆಯಲಾಗದ ಸಿನಿಮಾ' ಎನ್ನುತ್ತ ಪುಳಕಗೊಳ್ಳುತ್ತಾರೆ.

'ಒಂದು ತಿಂಗಳ ಕಾಲ ನಾವು ಬೇರೆಯದೇ ಜಗತ್ತಿನಲ್ಲಿ ಇದ್ದ ಹಾಗೆ ಭಾಸವಾಗಿತ್ತು. ನಾನು ಪಕ್ಕಾ ದಕ್ಷಿಣ ಭಾರತದ ಊಟ ಇಷ್ಟಪಡುವವಳು. ಅಲ್ಲಿನ ಊಟಕ್ಕೆ ಹೊಂದಿಕೊಳ್ಳುವುದು ಕಷ್ಟ ಆಯ್ತು. ಆದ್ರೆ ಸ್ವೀಟ್ಸ್ ಅಂದ್ರೆ ನಂಗೆ ತುಂಬ ಇಷ್ಟ. ಅಲ್ಲಿ ಎಷ್ಟೊಂದು ಬಗೆಯ ಸ್ವೀಟ್ಸ್ ಇದ್ದವು. ನನ್ನ ಡಯಟ್ ಗಿಯಟ್ ಎಲ್ಲ ಮರೆತು ಬರೀ ಸ್ವೀಟ್ಸ್ ತಿಂದುಕೊಂಡೇ ಇದ್ದೆ' ಎಂದು ನಗುತ್ತಾರೆ ಸೋನಲ್.

ಜಯತೀರ್ಥ ನಿರ್ದೇಶನದ 'ಬನಾರಸ್' ಸಿನಿಮಾದಲ್ಲಿ ಜಾಹಿದ್ ಖಾನ್‌ಗೆ ಜೊತೆಯಾಗಿ ಸೋನಲ್ ನಟಿಸುತ್ತಿದ್ದಾರೆ. 'ಈ ಪಾತ್ರ ಎಷ್ಟು ಚೆನ್ನಾಗಿದೆ ಎಂದರೆ, ಜನರೆಲ್ಲ ಇದನ್ನು ನೋಡಿ ಮನುಷ್ಯರು ಇಷ್ಟೊಂದು ಒಳ್ಳೆಯವರಾಗಿರಲು ಸಾಧ್ಯವಾ ಎಂದು ಅಚ್ಚರಿಪಡ್ತಾರೆ. ಅಷ್ಟು ಮುದ್ದು ಪಾತ್ರವಿದು' ಎನ್ನುವ ಸೋನಲ್‌ಗೆ ಈ ಚಿತ್ರ ತನ್ನ ವೃತ್ತಿಬದುಕಿನಲ್ಲಿ ಮೈಲಿಗಲ್ಲು ನೆಡುತ್ತದೆ ಎಂಬ ನಂಬುಗೆಯಿದೆ. ಆ ಪಾತ್ರ, ಅದನ್ನು ಚಿತ್ರೀಕರಿಸುವ ಜಾಗ, ಕಥೆ, ಅಭಿನಯ ಎಲ್ಲ ಸೇರಿ ವಿಚಿತ್ರವಾದ ಅನುಭವವನ್ನು ಅವರು ಪಡೆದಿದ್ದಾರಂತೆ. ಬನಾರಸ್‌ನಲ್ಲೇ ಇನ್ನೂ ನಾಲ್ಕು ದಿನಗಳ ಶೂಟಿಂಗ್ ಬಾಕಿ ಇದೆಯಂತೆ.

'ಪಂಚತಂತ್ರ' ಸಿನಿಮಾದ ಮೂಲಕ ಚಂದನವನದಲ್ಲಿ ಲೈಮ್‌ಲೈಟ್‌ಗೆ ಬಂದಿರುವ ಸೋನಲ್ ಅವರಿಗೆ ಈಗ ಕೈತುಂಬ ಅವಕಾಶಗಳು. ಅವರ 'ಡೆಮೋ ಪೀಸ್' ಈಗ ತೆರೆಗೆ ಬರಲು ಸಜ್ಜಾಗಿದೆ. ದರ್ಶನ್ ಅಭಿನಯದ 'ರಾಬರ್ಟ್' ಸಿನಿಮಾದಲ್ಲಿಯೂ ಅವರು ಒಂದು ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಸಿಷ್ಠ ಸಿಂಹ ಅವರ ಜೊತೆ ನಟಿಸಿರುವ 'ತಲ್ವಾರ್ ಪೇಟೆ', ಉಪೇಂದ್ರ ಜೊತೆಗಿನ 'ಬುದ್ಧಿವಂತ 2', ತನುಷ್ ಜೊತೆಗಿನ 'ನಟ್ವರ್ ಲಾಲ್' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಅವರು ನಟಿಸುತ್ತಿದ್ದಾರೆ. 2020ರಲ್ಲಿ ಕನಿಷ್ಠ ಮೂರು ನಾಲ್ಕು ಸಿನಿಮಾಗಳಾದರೂ ಬಿಡುಗಡೆಯಾಗುತ್ತವೆ ಎಂಬ ವಿಶ್ವಾಸ ಅವರದ್ದು. ಇಷ್ಟಾದರೂ ಅವರಿಗೆ ಬ್ಯುಸಿ ಅಂತೇನೂ ಅನಿಸುತ್ತಿಲ್ಲವಂತೆ. 'ಇಷ್ಟವಾದ ಕೆಲಸ ಮಾಡುತ್ತಿರುವಾಗ ಹೇಗೆ ಬ್ಯುಸಿ ಅಂತ ಹೇಗೆ ಅನಿಸುತ್ತದೆ' ಎಂದು ಕೇಳಿ ನಗುತ್ತಾರೆ ಅವರು. ■



# ಚೇತನ್ ಬದುಕಿನ ದಾಂಪತ್ಯಗೀತೆ

ನಟ ಚೇತನ್, ಗಾಂಧಿನಗರದ ಉಳಿದ ನಟರಿಗಿಂತ ಭಿನ್ನ. ತಾನಾಯಿತು ತನ್ನ ನಟನೆ ಆಯಿತು ಎಂದು ಊರ ಉಸಾಬರಿಗೆ ಹೋಗದವರ ಗುಂಪಿನಲ್ಲಿ ಅವರಿಲ್ಲ. ಮೊದಲಿನಿಂದಲೂ ಬುಡಕಟ್ಟು ಜನಾಂಗದವರ ಪರವಾದ ಹೋರಾಟ, ಚಳವಳಿಗಳಲ್ಲಿ ತಮ್ಮನ್ನು ತಾವು ಗುರ್ತಿಸಿಕೊಂಡೇ ಬಂದಿರುವ ಚೇತನ್, ಚಿತ್ರರಂಗದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯದ ವಿರುದ್ಧದ 'ಮೀ ಟೂ' ಆಂದೋಲನಕ್ಕೂ ಗಟ್ಟಿಯಾಗಿ ಧ್ವನಿಗೂಡಿಸಿದ್ದರು. ಈಗಲೂ ನಟನೆಯ ಜೊತೆಜೊತೆಗೇ ಜನಪರ ಕೆಲಸಗಳಲ್ಲಿಯೂ ಅವರು ತೊಡಗಿಕೊಂಡಿದ್ದಾರೆ.

'ಆ ದಿನಗಳು' ಚಿತ್ರದ ಮೂಲಕ ಚಿತ್ರರಸಿಕರ ಮನಸಲ್ಲಿ ಸ್ಥಾನ ಪಡೆದ ಚೇತನ್ ಬದುಕಿನಲ್ಲೀಗ ದಾಂಪತ್ಯಗೀತೆ ಶುರುವಾಗುವ ಸಮಯ. ಅವರ ಮನಸ್ಸನ್ನು ಗೆದ್ದ ಮೇಘಾ ಜೊತೆ ಅವರು ವಿವಾಹವಾಗುತ್ತಿದ್ದಾರೆ. ನಟರ ವಿವಾಹ ಎಂದರೆ ಅದು ಎಷ್ಟು ಗ್ರ್ಯಾಂಡ್ ಆಗಿರುತ್ತದೆ ಎಂದೇ ಜನರು ಕಣ್ಣರಳಿಸುತ್ತಾರೆ. ತಮ್ಮ ವಿವಾಹದ ದೃಶ್ಯಗಳನ್ನು ಟೀವಿ ವಾಹಿನಿಗಳಿಗೆ ಮಾರಾಟ ಮಾಡಿ ಅದರಿಂದ ಹಣ ಮಾಡಿಕೊಳ್ಳುವ ಹೊಸ ಸಂಪ್ರದಾಯವೂ ಚಿತ್ರರಂಗದಲ್ಲೀಗ ಶುರುವಾಗಿದೆ.

ಆದರೆ ಚೇತನ್ ವಿವಾಹದ ವಿಷಯದಲ್ಲಿಯೂ ಉಳಿದ ನಟರಿಗಿಂತ ಭಿನ್ನವಾಗಿ ಕಾಣಿಸುತ್ತಾರೆ. ಫೆ. 2ರಂದು ಚೇತನ್ ವಿವಾಹ ನಡೆಯಲಿದೆ. ಅದು ಯಾವುದೋ ಹೋಟೆಲ್, ಅಥವಾ ಕಲ್ಯಾಣ ಮಂಟಪದಲ್ಲಿಯಲ್ಲ. ಬದಲಿಗೆ ಅನಾಥಾಶ್ರಮದಲ್ಲಿ ಅವರು ಮೇಘಾ ಅವರನ್ನು ಕೈ ಹಿಡಿಯಲಿದ್ದಾರೆ. ಅಲ್ಲಿ ಅದ್ದೂರಿ ಬಾಜಾ ಬಜಂತ್ರಿ, ಚಪ್ಪನ್ನಾರು ಬಗೆಯ ಖಾದ್ಯ ವೈವಿಧ್ಯಗಳೇನೂ ಇರುವುದಿಲ್ಲವಂತೆ. ಬದಲಿಗೆ ವಚನ ಗಾಯನ, ಸೂಫಿ ಸಂಗೀತ ಸೇರಿದಂತೆ ದೇಸೀ ಪ್ರಕಾರದ ನೃತ್ಯಕಾರ್ಯಕ್ರಮಗಳು ಇರುತ್ತವಂತೆ. ಅಂದರೆ ಅದ್ದೂರಿತನದಿಂದ ಪ್ರತಿಷ್ಠೆಯನ್ನು ಪ್ರತಿಷ್ಠಾಪಿಸಿಕೊಳ್ಳುವ ದಾರಿ ಬಿಟ್ಟು ಅವರು ಕಲಾದಾಸೋಹದ ವಿಶಿಷ್ಟ ದಾರಿಯನ್ನು ತುಳಿದಿದ್ದಾರೆ.

ಹಾಗಂತ ಚೇತನ್ ಯಾರಿಗೂ ಹೇಳದೆ ಮದುವೆಯಾಗುತ್ತಿಲ್ಲ. ಚಿತ್ರರಂಗದ ಗಣ್ಯರು, ಕಲಾವಿದರೆಲ್ಲರನ್ನೂ ಮದುವೆಗೆ ಆಹ್ವಾನಿಸುತ್ತಿದ್ದಾರೆ. ತಾವು ದಾಂಪತ್ಯ ಜೀವನಕ್ಕೆ ಕಾಲಿಡುವ ಗಳಿಗೆ, ಒಂದಿಷ್ಟು ಅನಾಥರಿಗೆ ತಮ್ಮ ಇಷ್ಟದ ತಾರೆಯರನ್ನು ಕಣ್ತುಂಬಿಕೊಳ್ಳುವ ಅವಕಾಶ ಮತ್ತು ಸಹೃದಯರಿಗೆ ಕಲಾಸ್ವಾದ ಉಣಿಸುವ ಗಳಿಗೆಯೂ ಆಗಬೇಕು ಎನ್ನುವುದು ಅವರ ಆಸೆ. ನಟನೊಬ್ಬನ ಖಾಸಗೀ ಬದುಕಿನ ಕ್ಷಣಗಳು ಸಾರ್ವಜನಿಕವಾಗಿಯೂ ಅನುಕರಣೀಯವಾಗುವುದು ಹೀಗೆಯೇ ಅಲ್ಲವೇ? ■